ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
ಅಂತರ್ಜಾಲ : www.kptcl.com

ಇ-ಮೇಲ್ ವಿಳಾಸ :director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ಸಂಖ್ಯೆ : ಕವಿಪ್ರನಿನಿ/ಕ.ಘ/ಸ-20510/2015-16
ಲಗತ್ತು : 03

ದಿನಾಂಕ: 28 JAN 2020

ಮುಖ್ಯ ಇಂಜಿನಿಯರ್(ವಿ)
ಪ್ರಸರಣ ವಲಯ
ಬೆಂಗಳೂರು/ಹಾಸನ/ಕಲ್ಬುರ್ಗಿ/ಮೈಸೂರು/ಬಾಗಲಕೋಟೆ/ತುಮಕೂರು

ಮಾನ್ಯರೆ,

ವಿಷಯ: ಸಂವಿಧಾನ ದಿವಸ ಆಚರಿಸುವ ಬಗ್ಗೆ.
ಉಲ್ಲೇಖ: 1. ಸರ್ಕಾರದ ಅಧೀನ (ಪ್ರ), ಇಂಧನ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ: ಸಿಓಆರ್‌ಡಿ 2019 ದಿನಾಂಕ: 25.11.2019.
2. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಕ.ಘ/ಸ-20510/2015-16 ದಿನಾಂಕ: 19.05.2018 ಹಾಗೂ 02.02.2018.

ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ), ಇಂಧನ ಇಲಾಖೆ, ರವರ ಪತ್ರ ದಿನಾಂಕ: 25.11.2019 ಸಂಖ್ಯೆ: ಎನರ್ಜಿ 216 ಸಿಓಆರ್‌ಡಿ 2019 ರಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರಿಗೆ ಬರೆದ ಪತ್ರದಂತೆ, ದಿನಾಂಕ: 26.11.2019 ರಿಂದ 14.04.2020 ರವರೆಗೆ ನಿಗಮ ವ್ಯಾಪ್ತಿಯ ಕಚೇರಿಗಳಲ್ಲಿ ಸಂವಿಧಾನ ದಿವಸ ಆಚರಿಸುವಂತೆ ತಿಳಿಸಲಾಗಿದೆ.

ಈ ಪ್ರಯುಕ್ತ ಸಂವಿಧಾನದ ಮುನ್ನುಡಿಯನ್ನು ಓದುವುದು ಮತ್ತು ಚರ್ಚಾಸ್ಪರ್ಧೆ, ವಿಚಾರ ಸಂಕಿರಣ, ಸಮ್ಮೇಳನ ಆಯೋಜಿಸಲು ಕ್ರಮಕೈಗೊಳ್ಳುವುದು ಮತ್ತು ಹೆಚ್ಚಿನ ವಿವರ/ಮಾಹಿತಿಯನ್ನು ಕೇಂದ್ರ ಸರ್ಕಾರದ ಡಿಪಾರ್ಟ್‌ಮೆಂಟ್ ಆಫ್ ಜಸ್ಟೀಸ್‌ನ ಜಾಲತಾಣದಿಂದ ಪಡೆದುಕೊಂಡು ನಿಗಮದ ವಲಯ ಹಾಗೂ ವೃತ್ತ ಕಚೇರಿಗಳು/ಸಂಬಂಧ ಪಟ್ಟ ಅಧೀನ ಕಚೇರಿಗಳಲ್ಲಿ ಕೈಗೊಂಡ ಕ್ರಮ ಹಾಗೂ ಚಟುವಟಿಕೆಗಳ ಬಗ್ಗೆ ವಿವರವನ್ನು ಸರಕಾರಕ್ಕೆ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಸಲ್ಲಿಸುವಂತೆ ಕೋರಿರುತ್ತಾರೆ.

ಆದ್ದರಿಂದ ಸಂವಿಧಾನಕ್ಕೆ ಸಂಬಂಧಿಸಿದ ವಿಷಯಗಳನ್ನು ಸೂಚಿತ ಅಂತರ್ಜಾಲದಿಂದ ಮಾಹಿತಿ ಪಡೆದು, ಕಾರ್ಯಕ್ರಮಗಳನ್ನು ರೂಪಿಸುವುದು, ಅವುಗಳಲ್ಲಿ ಚರ್ಚಾಸ್ಪರ್ಧೆ, ವಿಚಾರ ಸಂಕಿರಣ ಹಾಗೂ ಸಮ್ಮೇಳನವನ್ನು ನಿಗಮದ ವಲಯ ಹಾಗೂ ವೃತ್ತ ಕಚೇರಿಗಳಲ್ಲಿ ಆಯೋಜಿಸಲು ಕ್ರಮಜರುಗಿಸುವುದು . ಇದಕ್ಕಾಗಿ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸುವುದು, ಅಂದಾಜು ಖರ್ಚು ವೆಚ್ಚಗಳನ್ನು ನಿಗಮ ಅನುಮತಿಸಿದ ನಿಮ್ಮ ಆರ್ಥಿಕ ಅಧಿಕಾರದ ವ್ಯಾಪ್ತಿಯೊಳಗೆ ಆಯೋಜಿಸಲು ಸೂಚಿಸಿದೆ.

ನಿಮ್ಮ ಹಾಗೂ ಅಧೀನ ಕಚೇರಿಗಳಲ್ಲಿ ಕೈಗೊಂಡ ಕ್ರಮ ಹಾಗೂ ಚಟುವಟಿಕೆಗಳ ಬಗ್ಗೆ ವಿವರವನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಒಂದು ವಾರದ ಒಳಗೆ ನಿಗಮಕ್ಕೆ ಸಲ್ಲಿಸುವುದು.

ನಿಮ್ಮ ವಿಶ್ವಾಸಿ,

ನಿರ್ದೇಶಕರು (ಆಡಳಿತ ಮತ್ತು ಮಾನವ ಸಂ.)
ಕವಿಪ್ರನಿನಿ.

<u>ಪ್ರತಿಯನ್ನು ಮಾಹಿತಿಗಾಗಿ,</u>

- ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ), ಇಂಧನ ಇಲಾಖೆ, ಕರ್ನಾಟಕ ಸರಕಾರದ ಸಚಿವಾಲಯ, ಬೆಂಗಳೂರು.
- ಜಂಟಿ ಕಾರ್ಯದರ್ಶಿ (ಆಡಳಿತ), ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ 2ನೇ ಹಂತ, 7ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು.
- ಎಲ್ಲಾ ನಿರ್ದೇಶಕರು, ಕವಿಪ್ರನಿನಿ
- ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ
- ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಪ್ರಸರಣ) / (ಹಣಕಾಸು) / (ಆ ಮತ್ತು ಮಾ.ಸಂ.) / ನಿರ್ದೇಶಕರು ಮತ್ತು ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
- ಎಲ್ಲಾ ಅಧೀಕ್ಷಕ ಇಂಜಿನಿಯರುಗಳು, ಕವಿಪ್ರನಿನಿ
- ಅಧೀಕ್ಷಕ ಇಂಜಿನಿಯರ್ (ಐಟಿ ಮತ್ತು ಎಂಐಎಸ್), ನಿಗಮ ಕಾರ್ಯಾಲಯ, ಕವಿಪ್ರನಿನಿ ಕಾವೇರಿ ಭವನ ಬೆಂ.
- ಎಲ್ಲಾ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ
- ಆಡಳಿತಾಧಿಕಾರಿ (ಮಾನವ ಸಂಪನ್ಮೂಲ ತರಬೇತಿ ಕೇಂದ್ರ), ಕವಿಪ್ರನಿನಿ, ಹೂಡಿ, ಬೆಂಗಳೂರು.
- ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್, ಕವಿಪ್ರನಿನಿ
- ನಿಗಮದ ಎಲ್ಲಾ ಹಿರಿಯ ಅಧಿಕಾರಿಗಳು.
- ಕ್ರೋಢೀಕರಣ ಘಟಕ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.